# ವಾರ್ತಾ ವಿಶ್ಲೇಷಣೆ

## ಆರ್ಥಿಕ ಪ್ರಗತಿಯೇ ಸರ್ವಸ್ವವಲ್ಲ

**ಅರ್ಥಶಾಸ್ತ್ರದ** ಪಿತಾಮಹ ಎಂದು ಪರಿಗಣಿಸಲ್ಪಟ್ಟಿರುವ ಆ್ಯಡಮ್ ಸ್ಮಿತ್‌ರ ಪ್ರಕಾರ ವ್ಯಕ್ತಿಗೆ ಐಶ್ವರ್ಯೋತ್ಪತ್ತಿಯಲ್ಲಿ ಸಂಪೂರ್ಣ ಸ್ವಾತಂತ್ರ್ಯವಿದ್ದು ಸರ್ಕಾರದ ಯಾವ ನಿಯಂತ್ರಣವೂ ಇಲ್ಲದಿದ್ದರೆ ದೇಶದ ಆರ್ಥಿಕ ಪ್ರಗತಿ ಸ್ವಾಭಾವಿಕವಾಗಿ ಆಗುತ್ತದೆ. ಸ್ವ-ಆಸಕ್ತಿಯಿಂದ (*self-interest*) ವ್ಯಕ್ತಿಯು ಚೆನ್ನಾಗಿ ದುಡಿದು ಸ್ವಸಾಮರ್ಥ್ಯದಿಂದ ಐಶ್ವರ್ಯವನ್ನು ವೃದ್ಧಿಸುತ್ತ ಹೋಗುತ್ತಾನೆ. ಇದರಿಂದ ಸ್ವಹಿತವೂ ಸಾಧಿತವಾದಂತಾಗುತ್ತದೆ ಮತ್ತು ದೇಶದ ಆರ್ಥಿಕ ಅಭಿವೃದ್ಧಿಯೂ ಆಗುತ್ತದೆ. ಈ ತತ್ತ್ವ ಸ್ವಾಭಾವಿಕವಾಗಿ ಸ್ಪರ್ಧೆಯನ್ನು ಆಧರಿಸಿದೆ. ಅಮೆರಿಕದ ಆರ್ಥಿಕ ಪ್ರಗತಿಗೆ ಈ ತತ್ತ್ವವೇ ಹಿನ್ನೆಲೆಯಾಗಿರುವುದು.

ಅಮೆರಿಕವು ಇತ್ತೀಚಿನ ವರ್ಷಗಳಲ್ಲಿ ಆರ್ಥಿಕ ಕ್ಷೇತ್ರದಲ್ಲಿ ಅಪಾರ ಪ್ರಗತಿಯನ್ನು ಸಾಧಿಸಿದ್ದು, ಅದು ಆರ್ಥಿಕವಾಗಿ ಇಡೀ ಜಗತ್ತನ್ನೇ ಆಳುತ್ತಿದೆ ಎನ್ನಬಹುದು. ವಾಣಿಜ್ಯದ ಜಾಗತೀಕರಣದ ಹೆಸರಿನಲ್ಲಿ ಅದು ಆರ್ಥಿಕ ಒಡೆತನವನ್ನು ಸಾಧಿಸಲು ಪ್ರಯತ್ನಿಸುತ್ತಿದೆ ಎಂಬುದು ಹಲವು ಆರ್ಥಿಕ ಚಿಂತಕರ ಅಭಿಪ್ರಾಯ.

ಈ ಮೇಲಿನ ಆರ್ಥಿಕ ತತ್ತ್ವದಿಂದ ಆರ್ಥಿಕ ಸಮಾನತೆಯನ್ನು ಪಡೆಯಲು ಸಾಧ್ಯವೇ? ಬಡತನ ನಿವಾರಣೆ ಸಾಧ್ಯವೆ?—ಎಂಬುದು ಪ್ರಶ್ನೆ. *The Nation* (ಮೇ, ೮,೨೦೦೦) ಎಂಬ ಅಮೆರಿಕ ಪತ್ರಿಕೆಯು ವರದಿ ಮಾಡುವಂತೆ, ಅಮೆರಿಕದಲ್ಲಿ ಒಟ್ಟು ರಾಷ್ಟ್ರೀಯ ಸಂಪತ್ತು ಇತ್ತೀಚಿನ ಎರಡು ದಶಕಗಳಲ್ಲಿ ಅಭೂತಪೂರ್ವ ವೃದ್ಧಿಯಾಗಿದ್ದರೂ ಗೃಹ ವರಮಾನದಲ್ಲಿ ಗಮನಾರ್ಹ ಪ್ರಗತಿಯಾಗಿಲ್ಲ—ಹೆಚ್ಚು ಕಡಿಮೆ ಒಂದೇ ರೀತಿಯೆ ಉಳಿದಿದೆ ಎನ್ನಬಹುದಾಗಿದೆ. ಅಂದರೆ ಐಶ್ವರ್ಯ ಕೆಲವೇ ವ್ಯಕ್ತಿಗಳಲ್ಲಿ ಕೇಂದ್ರೀಕೃತವಾಗುತ್ತಿದೆ—ಶ್ರೀಮಂತ-ಬಡವರ ಅಂತರ ಅಧಿಕವಾಗುತ್ತಿದೆ. ಇದು ಅಮೆರಿಕಕ್ಕೆ ಮಾತ್ರ ಅನ್ವಯಿಸುವುದಲ್ಲ, ಜಗತ್ತಿನಾದ್ಯಂತ ಎಲ್ಲ ಕಡೆಯೂ ಹೀಗೇ ಆಗುತ್ತಿದೆ. 'ಹಿಂದಿನ ಎರಡು ಶತಮಾನಗಳಲ್ಲಿ ಅಮೆರಿಕರನ್ನು ಕಾಡಿದ ಸಮಸ್ಯೆಗಳೆಲ್ಲಕ್ಕಿಂತ ಗುರುತರವಾದುದು ಯಾವುದೆಂದರೆ, ಇಂದಿನ ಅತಿರೇಕದ ಬಂಡವಾಳಶಾಹಿಯ ವಿಸ್ತರಣೆಯಿಂದ ಉಂಟಾಗಿರುವ ಆರ್ಥಿಕ, ವರಮಾನ ಮತ್ತು ಅಧಿಕಾರದ ವಿಸ್ತಾರವಾದ ಅಸಮಾನತೆ,' ಎನ್ನುತ್ತಾರೆ ಎರಿಕ್ ಫೋನರ್ (*The Nation* ಜನವರಿ, ೧೦-೧೭, ೨೦೦೦). ಇಷ್ಟೇ ಅಲ್ಲದೆ, ಜೀವನದ ಅರ್ಥಹೀನತೆ, ಮಾನವೀಯ ಮೌಲ್ಯಗಳ ಕುಸಿತ ಮತ್ತು ಇವುಗಳ ದುಷ್ಪರಿಣಾಮಗಳು ಅಮೆರಿಕದಲ್ಲಿ ಮಾತ್ರವಲ್ಲದೆ ಎಲ್ಲೆಲ್ಲಿಯೂ ಕಂಡುಬರುವ ಸಂಗತಿಗಳಾಗಿವೆ. ಇದಕ್ಕೆ ಕಾರಣ ಉನ್ನತ ಮೌಲ್ಯಗಳನ್ನು ಕಡೆಗಣಿಸಿ ಕೇವಲ ಅರ್ಥಾನ್ವೇಷಣೆಗೇ ಪ್ರಾಧಾನ್ಯವನ್ನು ನೀಡಿರುವುದು. ಈ ಅರ್ಥಾನ್ವೇಷಣೆಯ ತರಾತುರಿಯಲ್ಲಿ 'ವಿಶಾಲಾರ್ಥದ ಸಾಮಾಜಿಕ ಗುರಿಗಳನ್ನು ಅಂತರ್ರಾಷ್ಟ್ರೀಯ (ಆರ್ಥಿಕ) ಸ್ಪರ್ಧೆಯಲ್ಲಿ ಒಂದು ಹೊರೆ ಎಂದು ಖಂಡಿಸಲಾಯಿತು,' (*The Nation*).

ಐಶ್ವರ್ಯೋತ್ಪತ್ತಿಯಲ್ಲಿ ಎಲ್ಲರಿಗೂ ಸಮಾನ ಸಾಮರ್ಥ್ಯವಿರುವುದಿಲ್ಲ. ನಾವು ಎಲ್ಲರೂ ಸಮಾನರು ಎಂದು ಎಷ್ಟೇ ಹೇಳಿದರೂ ಎಲ್ಲರ ಸಾಮರ್ಥ್ಯ ಒಂದೇ ರೀತಿ ಇರುವುದಿಲ್ಲ. ಅಷ್ಟೇ ಅಲ್ಲದೆ ಒಬ್ಬೊಬ್ಬರು ಒಂದೊಂದು ಕ್ಷೇತ್ರದಲ್ಲಿ ಸಮರ್ಥರಾಗಿರುತ್ತಾರೆ. ಆದ್ದರಿಂದ ಕೇವಲ ಆರ್ಥಿಕ ಪ್ರಗತಿಯನ್ನೇ ಗಮನದಲ್ಲಿಟ್ಟುಕೊಂಡು ಒಂದು ಸ್ಪರ್ಧಾತ್ಮಕ ಆರ್ಥಿಕ ಪದ್ಧತಿಯನ್ನು ನಿರ್ಮಿಸಿದರೆ ಅದು ಬಡವ-ಬಲ್ಲಿದರ ಅಂತರವನ್ನು ಹೆಚ್ಚಿಸುವುದು ಸಹಜ.

ಆ್ಯಡಮ್ ಸ್ಮಿತ್‌ರ ಸ್ವ-ಆಸಕ್ತಿಯ ಭಾವನೆಯನ್ನು ಕೇವಲ ಆರ್ಥಿಕ ಕ್ಷೇತ್ರಕ್ಕೆ ಮಾತ್ರ ಅನ್ವಯಿಸದೆ ನೈತಿಕ ಮತ್ತು ಆಧ್ಯಾತ್ಮಿಕ ಕ್ಷೇತ್ರಕ್ಕೂ ಅನ್ವಯಿಸಬೇಕು. ಆಗ ವ್ಯಕ್ತಿಯು ನೈತಿಕ ಮತ್ತು ಆಧ್ಯಾತ್ಮಿಕ ಉನ್ನತಿಗೆ ಹೆಚ್ಚು ಪ್ರಾಶಸ್ತ್ಯವನ್ನು ಕೊಡುತ್ತಾನೆ. ಆಗ ಆರ್ಥಿಕ ಪ್ರಗತಿಯನ್ನು ಕಡೆಗಣಿಸದಿದ್ದರೂ, ಅದು ತನ್ನ ಸರ್ವಸ್ವಾಮ್ಯತ್ವವನ್ನು ಕಳೆದುಕೊಳ್ಳುತ್ತದೆ. ಆಗ ವ್ಯಕ್ತಿಯ ಮತ್ತು ಸಮಾಜದ ಸರ್ವತೋಮುಖ ಪ್ರಗತಿ ಸಾಧ್ಯವಾಗುತ್ತದೆ. ಕೇವಲ ಅರ್ಥವೇ ಪ್ರಧಾನವಾದರೆ ಅದರಿಂದ ಅನರ್ಥವೇ. ಅದಕ್ಕೇ ಶಂಕರಾಚಾರ್ಯರು ಅರ್ಥಮನರ್ಥಂ ಭಾವಯ ನಿತ್ಯಂ ಎಂದರು. ❑

## ಪ್ರಶಂಸೋನ್ಮತ್ತತೆ

**ಇತ್ತೀಚೆಗೆ** ಮಕ್ಕಳನ್ನು ಪ್ರಶಂಸಿಸುವುದಕ್ಕೆ ಅತಿಯಾದ ಒತ್ತನ್ನು ನೀಡಲಾಗುತ್ತಿದೆ. ಈ ರೀತಿಯ ಪ್ರಶಂಸೆಯಿಂದ ಮಕ್ಕಳ ಆತ್ಮ-ವಿಶ್ವಾಸ ಹೆಚ್ಚುತ್ತದೆ ಎಂದು ಹೇಳಲಾಗುತ್ತಿದೆ. ಆದರೆ ಪ್ರಶಂಸೆಯನ್ನು ಕೇಳುವುದೇ ಒಂದು ಚಾಳಿಯಾಗಿ ಮಕ್ಕಳು ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸುವ ಸಾಮರ್ಥ್ಯವನ್ನು ಕಳೆದುಕೊಳ್ಳುವ ಸಂಭವವಿದೆ. ತಮ್ಮ ಯೋಗ್ಯತೆಯನ್ನು ತಾವೇ ಅಳೆದುಕೊಳ್ಳಲಾಗದೆ ಮಕ್ಕಳು ಪ್ರತಿಯೊಂದಕ್ಕೂ ಇತರರನ್ನು ಅವಲಂಬಿಸುವ ಸ್ವಭಾವವನ್ನು ಬೆಳೆಸಿಕೊಳ್ಳುತ್ತಾರೆ. ಅವರಿಗೆ ಪ್ರತಿದಿನವೂ ಪ್ರಶಂಸೆಯ ಡೋಸ್ ಬೀಳುತ್ತಿರಬೇಕು. ಪ್ರಶಂಸೆ ಇಲ್ಲದಿದ್ದರೆ ಅವರು ಹತಾಶರಾಗುತ್ತಾರೆ. ಇಂತಹ ಪ್ರಶಂಸೋನ್ಮತ್ತ (*Praise Junkies*) ಮಕ್ಕಳು ದುರ್ಬಲರಾಗುತ್ತಾರೆ, ಆತ್ಮ-ವಿಶ್ವಾಸವನ್ನು ಕಳೆದುಕೊಳ್ಳುತ್ತಾರೆ, ಸ್ವಲ್ಪ ಅವಮಾನವಾದರೂ ಸಹಿಸಲಾಗದೆ, ಕೆಲವೊಮ್ಮೆ ಆತ್ಮಹತ್ಯೆಯನ್ನೂ ಮಾಡಿಕೊಳ್ಳುತ್ತಾರೆ.

ಆದ್ದರಿಂದ ತಂದೆ ತಾಯಿಗಳು ಮಕ್ಕಳನ್ನು ಅತಿಯಾಗಿ ಹೊಗಳಿ ಅವರಿಗೆ ಪ್ರಶಂಸೆಯ ಅಮಲನ್ನು ಹಿಡಿಸಬಾರದು. ಮುಂದೆ ಅವರನ್ನು ಪ್ರಶಂಸೆ ಮಾಡುವವರಿಲ್ಲದಾಗ ಅವರ ಜೀವನ ದುಃಖಮಯ